ಪ್ರಮಾಣ ವಚನ ಬೋಧಿಸಿದ ದಿನಾಂಕಃ **26.02.2026.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ನಾನು ನನ್ನ ಗಂಡ ಮೃತಪಟ್ಟಿದ್ದಾರೆ ಖಾತೆ ಬದಲಾವಣೆ ಮಾಡಬೇಕೆಂದು ಆರ್.ಆರ್.ಟಿ.ಸಿ.ಆರ್.**11/2005-06**ರಲ್ಲಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೌತಿ ಖಾತೆ ಮಾಡಿಸಲು ಅರ್ಜಿಸಲ್ಲಿಸಿದಾಗ ಸದರಿ ಕೇಸು ದಾಖಲಾಗಿದೆ ಎಂದರೆ ಸರಿಯಲ್ಲ. ನಮ್ಮ ಗಂಡನು **1998** ರಿಂದ ಕಾಣೆಯಾಗಿದ್ದು, ಅವರು ಮೃತಪಟ್ಟಿದ್ದಾರೆಂದು ಪರಿಗಣಿಸಿ ಖಾತೆ ಬದಲಾವಣೆ ಮಾಡಿಕೊಡಬೇಕೆಂದು **2005 – 06**ರಲ್ಲಿ ಅರ್ಜಿಕೊಟ್ಟಿದ್ದೇನೆ ಎಂದರೆ ಸರಿ . ಈಗ ನನ್ನ ಗಂಡ ಬದುಕಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಗಂಡ **2**ನೆ ಮದುವೆ ಆಗಿದ್ದಾರೆ ಎಂಬ ಕಾರಣಕ್ಕಾಗಿ ನಾನು ಅವರು ಮೃತ ಪಟ್ಟಿದ್ದಾರೆಂದು ಪೌತಿ ಖಾತೆಗೆ ಅರ್ಜಿಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಮೂರನೇ ಪ್ರತಿವಾದಿಯನ್ನು ತೋರಿಸಿ ಇವರೇ ನಿಮ್ಮ ಗಂಡ ಶಾಮಣ್ಣ ಎಂದು ಕೇಳಿದಾಗ ಸಾಕ್ಷಿಯು ನನ್ನ ಗಂಡ ಕಾಣೆಯಾಗಿ **25** ವರ್ಷವಾಗಿದೆ ಇದೇ ವ್ಯಕ್ತಿ ನನ್ನ ಗಂಡ ಎಂದು ಗುರುತು ಹಿಡಿಯಲು ಆಗುವುದಿಲ್ಲ ಎಂದು ಹೇಳಿದ್ದಾರೆ. ನ್ಯಾಯಾಲಯದ ಮುಂದೆ ಇರುವ ಮೂರನೇ ಪ್ರತಿವಾದಿಯು ನನ್ನ ಗಂಡ ಎಂದು ಗೊತ್ತಿದ್ದರೂ ಕೂಡ ಗುರುತಿಸಲು ಸಾಧ್ಯವಿಲ್ಲವೆಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುನಿತಾಯಮ್ಮನವರ ಮಗನ ಹೆಸರು ಅಭಿಲಾಷ್ ಎಂದರೆ ಸರಿ. ಸದರಿ ಅಭಿಲಾಷ್ ಎಂಬ ವ್ಯಕ್ತಿಯು ಮುನಿತಾಯಮ್ಮ, ಅಶ್ವತಮ್ಮ, ಹಾಗೂ ಇತರೆ ಕುಟುಂಬದ ಸದಸ್ಯರ ವಿರುದ್ಧ ಓ.ಎಸ್.**19/2013**ರಲ್ಲಿ ವಿಭಾಗಕ್ಕಾಗಿ ದಾವೆಯನ್ನು

ಹಾಕಿದ್ದಾರೆ ಎಂದರೆ ಸರಿ. ಈ ಎರಡು ಪ್ರಕರಣಗಳು ಒಟ್ಟಿಗೆ ನಡೆಯುತ್ತಿರುವ ಕಾರಣ ಸದರಿ ಅಭಿಲಾಷ್‌ನನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಹಾಗೂ ಉಳಿದ ಕುಟುಂಬದ ಸದಸ್ಯರನ್ನು ಈ ಕೇಸಿನಲ್ಲಿ ಸೇರಿಸಿದ್ದಾರೆ ಎಂದರೆ ಗೊತ್ತಿಲ್ಲ. ವಾದಿಯರು ಹಾಗೂ **1** ರಿಂದ **8**ನೇ ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಓಸ್.ಎಸ್.**19/2013**ರಲ್ಲಿ ವಾದಿ ಅಭಿಲಾಷ್ ಮತ್ತು **1** ರಿಂದ **6**ನೇ ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಸದರಿಯವರನ್ನು ಹೊರತುಪಡಿಸಿ ಬೇರೆಯಾರಾದರೂ ಒಟ್ಟು ಕುಟುಂಬದ ಸದಸ್ಯರು ಇದ್ದಾರಾ? ಎಂದರೆ ಇಲ್ಲ. ನನ್ನ ಪ್ರಕಾರ ಸುಬ್ಬಣ್ಣನ ಕುಟುಂಬದ ಎಲ್ಲಾ ವಾರಸುದಾರರನ್ನು ಈ **2** ಕೇಸಿನಲ್ಲಿ ಸೇರಿಸಿದ್ದಾರೆ ಎಂದರೆ ಸರಿ .

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು **3**ನೇ ಪ್ರತಿವಾದಿ ಶಾಮಣ್ಣನ ದರ್ಮಪತ್ನಿಯಾಗಿರುತ್ತೇನೆ ಮತ್ತು **7**ನೇ ಪ್ರತಿವಾದಿಯು ನನ್ನ ಮಗ ಎಂದು ಹೇಳಿದ್ದೇನೆ ಎಂದರೆ ಸರಿ. ನಾನು ನನ್ನ ಪ್ರಮಾಣಪತ್ರದಲ್ಲಿ ಎಲ್ಲಿಯೂ ಕೂಡ **3**ನೇ ಪ್ರತಿವಾದಿಯು **25** ವರ್ಷದ ಹಿಂದೆ ಮನೆಯನ್ನು ಬಿಟ್ಟು ಹೋಗಿದ್ದಾರೆ ಹಾಗೂ ಈ ಬಗ್ಗೆ ನಾನು ಎಲ್ಲಿಯೂ ತಿಳಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ಸುಬ್ಬಣ್ಣನವರ ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳಿ ಬರೆಸಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಗಳು ಹೇಗೆ ಬಂದು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಸುಬ್ಬಣ್ಣನವರ ಪಿತ್ರಾರ್ಜಿತ ಆಸ್ತಿಗಳು ಎಂದು ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಗೊತ್ತಿಲ್ಲ.

ಸರ್ವೆ ನಂಃ**2/1**ರಲ್ಲಿ **2**ಎಕರೆ **11**ಗುಂಟೆ ಇದೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಸರ್ವೆ ನಂಬರ್ ಗಳು ಹಾಗೂ ವಿಸ್ತೀರ್ಣಗಳನ್ನು ಹೇಳಲು ಆಗುತ್ತಿಲ್ಲ ಎಂದು ಹೇಳುತ್ತಾರೆ. ಐ.ಎಲ್.ಆರ್. ನಲ್ಲಿ ಸದರಿ ಆಸ್ತಿಯು ಸುಬ್ಬಣ್ಣನ ತಂದೆ ಕೆಂಪಣ್ಣನ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂಃ**4/2, ಸರ್ವೆ** ನಂ.**39,** ಸರ್ವೆ ನಂಃ**61/2,** ಸರ್ವೆ ನಂಃ**70**ರಲ್ಲಿ **6.08**ಗುಂಟೆ, ಸರ್ವೆ ನಂಃ**71/10**ರಲ್ಲಿ **1**ಎಕರೆ **10** ಗುಂಟೆ, ಸರ್ವೆ ನಂಃ**69/3** ರಲ್ಲಿ **1**ಎಕರೆ **11**ಗಂಟೆ, ಸರ್ವೆ ನಂಃ**34/2**ರಲ್ಲಿ

**38**ಗುಂಟೆ, ಸರ್ವೆ ನಂ:**1**ರಲ್ಲಿ **7.08**ಗುಂಟೆ , ಸರ್ವೆ ನಂ:**35/1**ರಲ್ಲಿ **1**ಎಕರೆ **3**ಗುಂಟೆ, ಸರ್ವೆ ನಂ:**39**ರಲ್ಲಿ **6**ಎಕರೆ **15**ಗುಂಟೆ, ಸರ್ವೆ ನಂ:**26/2**ರಲ್ಲಿ **5**ಎಕರೆ **23**ಗುಂಟೆ,ಸರ್ವೆ ನಂ:**24**ರಲ್ಲಿ **2**ಎಕರೆ **6**ಗುಂಟೆ, ಸರ್ವೆ ನಂ:**24**ರಲ್ಲಿ ಕಾನೇಶುಮಾರಿ ಖಾತಾ ಸಂಖ್ಯೆ:**32/37**ರಲ್ಲಿ **100 100** ವಿಸ್ತೀರ್ಣದ ದಾಖಲಾತಿಗಳು ಸುಬ್ಬಣ್ಣನವರ ಹೆಸರಿನಲ್ಲಿ ಇದೆ ಎಂದರೆ ಇರಬಹುದು ಗೊತ್ತಿಲ್ಲ.

ಸುಬ್ಬಣ್ಣನವರ ಜೀವಿತ ಕಾರದಲ್ಲಿ ಸುಬ್ಬಣ್ಣ ಹಾಗೂ ಅವರ ಮಕ್ಕಳ ನಡುವೆ ವಿಭಾಗವಾಗಿದೆ ಎಂದು ತಿಳಿಸಿದ್ದಾರೆ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲ ಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ವಿಭಾಗ ಪತ್ರವಿಲ್ಲ ಆದರೆ, ಬೇರೆ ದಾಖಲಾತಿಗಳನ್ನು ಹಾಜರು ಪಡಿಸಿರುವ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರಮಾಣಪತ್ರದಲ್ಲಿ ಎ ಷಡ್ಯೂಲ್ ಆಸ್ತಿಯು ರಾಮಾಂಜನಪ್ಪನವರಿಗೆ ಬಂದಿದೆ ಎಂದು ತಿಳಿಸಿದ್ದು , ಯಾವ ಅಧಾರದ ಮೇಲೆ ಸದರಿ ಆಸ್ತಿಗಳು ಮತ್ತು ವಿಸ್ತೀರ್ಣವನ್ನು ನಮೂದಿಸಿದ್ದೀರಾ ಎಂದರೆ ಗೊತ್ತಿಲ್ಲ. ಅದೇ ರೀತಿ ಪ್ರಮಾಣಪತ್ರದಲ್ಲಿ ಬಿ ಯಿಂದ ಎಫ್ ಷಡ್ಯೂಲ್ ಆಸ್ತಿಗಳು ನರಸಿಂಹಮೂರ್ತಿ, ಶಾಮಣ್ಣ , ಗಾಯತ್ರಮ್ಮ, ಹುಚ್ಚಮ್ಮ ಮತ್ತು ಸುಬ್ಬಣ್ಣನವರ ಹಿಸ್ಸೆಗೆ ಬಂದಿದೆ ಎಂದು ತಿಳಿಸಿದ್ದು ಅವುಗಳ ಬಗ್ಗೆ ಕೂಡ ನನಗೆ ಗೊತ್ತಿಲ್ಲ. ಸದರಿ ಪಾರಿಕತ್ತಿನ ಆಧಾರ ಮೇಲೆ ಕಂದಾಯ ದಾಖಲೆಗಳು ಬದಲಾವಣೆಯಾಗಿದೆ ಎಂದು ತಿಳಿಸಿದ್ದು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. **1983** ರಿಂದ **1998**ರ ಅವಧಿಯಲ್ಲಿ ಪಾರಿಕತ್ತಿನ ಆಧಾರ ಮೇಲೆ **3**ನೇ ಪ್ರತಿವಾದಿಯ ಹೆಸರಿಗೆ ಯಾವುದೇ ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿ. ಅದೇರೀತಿ ರಾಮಾಂಜನಪ್ಪನವರು ಖಾತೆಯನ್ನು ಬದಲಾವಣೆ ಮಾಡಿಸಿಕೊಂಡಿದ್ದಾರಾ? ಎಂದರೆ ಇಲ್ಲ. ಅದೇರೀತಿ ಎಫ್.ಷಡ್ಯೂಲ್.ಆಸ್ತಿಗಳು ಸುಬ್ಬಣ್ಣನ ಹೆಸರಿಗೆ ಖಾತೆಯಾಗಿದೆಯಾ? ಎಂದರೆ ಇಲ್ಲ. ಅದೇರೀತಿ ಡಿ.ಷಡ್ಯೂಲ್.ಆಸ್ತಿಗಳು ಗಾಯತ್ರಮ್ಮನವರ ಹೆಸರಿಗೆ ಖಾತೆಯಾಗಿದೆಯಾ? ಎಂದರೆ ಸಾಕ್ಷಿಯು **1**ಎಕರೆಗೆ ಖಾತೆಯಾಗಿದೆ ಆದರೆ ಸರ್ವೆ ನಂ:**26**ರಲ್ಲಿ **1**ಎಕರೆ **33**ಗುಂಟೆಗೆ ಖಾತೆಯಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎನ್ನು ತ್ತಾರೆ. ಈ ರೀತಿ **4**ನೇ

ಪ್ರತಿವಾದಿಗೆ 1ಎಕರೆ ಖಾತೆಯಾಗಿರುವ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹೌದು. ಅದೇರೀತಿ ಹುಚ್ಚಮ್ಮನ ಹೆಸರಿಗೆ ಇ ಷಡ್ಯೂಲ್ ಆಸ್ತಿಯ ಖಾತೆಯು ಬದಲಾವಣೆಯಾಗಿರು ಬಗ್ಗೆ ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅದೇರೀತಿ ನರಸಿಂಗಮೂರ್ತಿಯವರ ಹೆಸರಿಗೆ ಬಿ ಷಡ್ಯೂಲ್ ಆಸ್ತಿಯ ಖಾತೆಯು ಬದಲಾವಣೆಯಾಗಿರುವ ಬಗ್ಗೆ ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ನನ್ನ ಮತ್ತು 3ನೇ ಪ್ರತಿವಾದಿಯ ಮದುವೆಯು 1990ರಲ್ಲಿ ಆಗಿದೆ. ಅದಕ್ಕೂ ಮುಂಚಿತವಾಗಿ ನನಗೆ 3ನೇ ಪ್ರತಿವಾದಿಯ ಕುಟುಂಬದ ಬಗ್ಗೆ ಪರಿಚಯವಿರಲಿಲ್ಲ ಎಂದರೆ ಸರಿ. ನನ್ನ ಮದುವೆಯು 1990ರಲ್ಲಿ ಆಗಿರುವ ಕಾರಣ ಅದಕ್ಕೂ ಪೂರ್ವದಲ್ಲಿ 3ನೇ ಪ್ರತಿವಾದಿಯ ಕುಟುಂಬದಲ್ಲಿ ಆಗಿರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. 1983ರಲ್ಲಿ ವಿಭಾವಾಗಿರುವ ವಿಚಾರ ನನಗೆ ಗೊತ್ತಿಲದ್ದಿದ್ದರೂ ಕೂಡ , ವಿಭಾಗವಾಗಿದೆ ಎಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆಯ ಪೂರ್ವದಲ್ಲಿ ಆಗಲಿ ಅಥವಾ ನಂತರದಲ್ಲಿಯಾಗಲಿ ದಾವಾ ಆಸ್ತಿಯ ಖಾತೆಗಳು ಪಾರಿಕತ್ತಿನ ಆಧಾರ ಮೇಲೆ ಬದಲಾವಣೆಯಾಗಿದೆಯಾ? ಎಂದರೆ ಗೊತ್ತಿಲ್ಲ. 3ನೇ ಪ್ರತಿವಾದಿಯು ಬದುಕಿದ್ದರೂ ಕೂಡ ಅವರು ಮೃತಪಟ್ಟಿದ್ದಾರೆಂದು ಸುಳ್ಳು ಅರ್ಜಿಯನ್ನು ಕೊಟ್ಟು ಸರ್ವೆ ನಂಃ69/2,70,71/1ರ ಆಸ್ತಿಗಳ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿಯು ನನ್ನ ಜೀವನಕ್ಕಾಗಿ ಯಾವುದೇ ಆಧಾಯ ಇಲ್ಲದ ಕಾರಣ ಸದರಿ ಆಸ್ತಿಗಳ ಖಾತೆಯನ್ನು ಕಾನೂನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆಂದು ಹೇಳುತ್ತಾರೆ. ಸದರಿ ಖಾತೆಯು ಆರ್.ಆರ್.ಟಿ.ಸಿ.ಆರ್.11/2005-06ರಂತೆ ಪೌತಿಖಾತೆಯಾಗಿದೆ ಅಂದರೆ ಸಾಕ್ಷಿಯು ಪೌತಿಕಾತೆಯಲ್ಲ ಎಂದು ಹೇಳುತ್ತಾರೆ. ನಾನೇ ಹಾಜರುಪಡಿಸಿರುವ ನಿ.ಡಿ.52-55ರ ದಾಖಲೆ ಪ್ರಕಾರ 3ನೇ ಪ್ರತಿವಾದಿಯಿಂದ ನನ್ನ ಹೆಸರಿಗೆ ಪೌತಿಖಾತೆ ಎಂದು ನಮೂದಾಗಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಗೊತ್ತಿಲ್ಲ.

ಮುಂದುವರೆದ **ವಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.